ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :—

ಅ) ಫಲಾನುಭವಿಗಳನ್ನು ಗುರುತಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಆ) ಗುರುತಿಸುವ ಪ್ರಕ್ರಿಯೆ ಮುಗಿದ ನಂತರ ಫಲಾನುಭವಿಗಳ ಸಂಖ್ಯೆ ತಿಳಿಯುವುದು. ಸದರಿ ಪ್ರಕ್ರಿಯೆ ಮುಗಿದ ಕೂಡಲೇ ಈ ಯೋಜನೆಯನ್ನು ಜಾರಿಗೆ ತರಲಾಗುವುದು.

ಇ) ಗ್ರಾಮಾಂತರ ಪ್ರದೇಶಗಳಲ್ಲಿ ಈ ಕಾರ್ಯ ಮುಗಿದಿದ್ದು ಪಟ್ಟಣ ಪ್ರದೇಶಗಳಲ್ಲಿ ಫಲಾನುಭವಿಗಳನ್ನು ನಗರ ಸಭೆಯ ಸಹಯೋಗದೊಂದಿಗೆ ಗುರುತಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಶೀಘ್ರದಲ್ಲಿಯೇ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಮೈಸೂರು ಜಿಲ್ಲೆಯಲ್ಲಿನ ಹೊಸ ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ

2434(3245) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಹೊಸ ಕೈಗಾರಿಕೆಗಳು ಹಾಗೂ ಕಾರ್ಖಾನೆಗಳು ಪ್ರಾರಂಭವಾಗುವವೆ; ಅವು ಯಾವುವು. ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭವಾಗುವುವು.

ಆ) ಸದರಿ ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ದೊರಕುವಂತಾಗಲು ಸರ್ಕಾರ ನಿಯಮಗಳನ್ನೇನಾದರೂ ರೂಪಿಸಿದೆಯೇ;

ಇ) ಹೌದಾದಲ್ಲಿ, ಈ ಬಗ್ಗೆ ವಿವರ ನೀಡಲಾಗುವುದೇ;

ಈ) ಇಲ್ಲದಿದ್ದಲ್ಲಿ ಸ್ಥಳೀಯರಿಗೆ ಉದ್ಯೋಗ ದೊರಕುವಂತಾಗಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳುವುದು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಮೈಸೂರು ಜಿಲ್ಲೆಯಲ್ಲಿ ಈ ಕೆಳಗಿನ ಸಂಸ್ಥೆಗಳು ಕಾರ್ಖಾನೆ ಪ್ರಾರಂಭಿಸಲು ಅನುಮತಿ ಪಡೆದಿವೆ.

ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು

1.	ಇನ್‌ಫೋಸಿಸ್ ಟೆಕ್ನಾಲಜೀಸ್ ಹೆಬ್ಬಾಳ ಕೈಗಾರಿಕಾ ಪ್ರದೇಶ	ಅನುಷ್ಠಾನದ ಹಂತದಲ್ಲಿದೆ.
2.	ಪ್ರೀತಿ ಗ್ರಾನೈಟ್ಸ್ ಎಕ್ಸ್‌ಪೋರ್ಟ್	"
3.	ಪಟ್ಟಾಬಿ ಎಂಟರ್‌ಪ್ರೈಸಸ್ ರಮಾವಿಲಾಸ ರಸ್ತೆ, ಮೈಸೂರು	
4.	ಮೆನ್‌ಲಾನ್ ಪಾಲಿಸ್ಟರ್ಸ್ ಬೆಳವಾಡಿ ರಸ್ತೆ, ಮೈಸೂರು	
5.	ಎ.ಎಂ. ಟೆಕ್‌ಪ್ಯಾಕ್ ಲಿಮಿಟೆಡ್ ಹೆಬ್ಬಾಳ್ ಕೈಗಾರಿಕಾ ಪ್ರದೇಶ	
6.	ಸೀತಾ ಪವರ್ ಪ್ರೈವೇಟ್ ಲಿಮಿಟೆಡ್, ಮೈಸೂರು	
7.	ಶ್ರೀರಾಯಲ್‌ಸೀಮಾ ಡಚ್ ಕಸೆನಡೋ	
8.	ಶ್ರೀ ಸುಭಾಷ್ ಪೈಪ್ಸ್ ಲಿ. ರಂಗನಾಥಪುರ, ಟಿ. ನರಸೀಪುರ ತಾಲ್ಲೂಕು	

ಅ) ಹೌದು.

ಇ) ಡಾ: ಸರೋಜಿನಿ ಮಹಿಷಿ ಅವರ ವರದಿ ಪ್ರಕಾರ 'ಎ' ಮತ್ತು 'ಬಿ' ಹುದ್ದೆಗಳಲ್ಲಿ ಶೇಕಡಾ 80ರಷ್ಟು ಹಾಗೂ 'ಸಿ' ಮತ್ತು 'ಡಿ' ಹುದ್ದೆಗೆ ಶೇಕಡ 100ರಷ್ಟು ಕನ್ನಡಿಗರನ್ನು ನೇಮಕಾತಿ ಮಾಡಿಕೊಳ್ಳಲು ಸ್ಪಷ್ಟ ನಿರ್ದೇಶನ ನೀಡಿದೆ. ಈ ವಿಷಯದಲ್ಲಿ ನೇಮಕಾತಿ ಮಾಡಿದ ಬಗ್ಗೆ ಪ್ರತಿ ಘಟಕದಿಂದ ವರದಿ ತರಿಸಿ ಜಿಲ್ಲಾ ಮಟ್ಟದ 'ಏಕ ಗವಾಕ್ಷಿ' ಸಮಿತಿಯ ಸಭೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಿಶೀಲಿಸಲಾಗುತ್ತದೆ.

ಈ) ಅನ್ವಯಿಸುವುದಿಲ್ಲ.

ತಿಯಮಲದಲ್ಲಿನ ಕರ್ನಾಟಕ ಛತ್ರ ನವೀಕರಣ ಯೋಜನೆ

2435 (3246) ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.